ಕರ್ನಾಟಕ ವಿಧಾನ ಸಭೆ

366 ಶ್ರೀ ಸಿದ್ದು ಸವದಿ (ತೇರದಾಳ್)

ಪ್ರೊಡಾ: ಮುಮ್ತಾಜ್ ಅಲಿ ಖಾನ್ ಹಜ್ ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.

ಅ) ರಾಜ್ಯದಲ್ಲಿ ಅಭಿವೃದ್ಧಿ ಪಡಿಸದ ಮಸೀದಿಗಳು, ಜೈನ್ ಮಂದಿರಗಳು ಮತ್ತು ಶಾದಿಮಹಲ್‌ಗಳ ಸಂಖ್ಯೆ ಎಷ್ಟು? (ಕ್ಷೇತ್ರವಾರು ವಿವರ ನೀಡುವುದು)

ರಾಜ್ಯದಲ್ಲಿ ಮಸೀದಿಗಳು, ಜೈನ್ ಮಂದಿರಗಳು ಹಾಗೂ ಶಾದಿಮಹಲ್‌ಗಳನ್ನು ಅಭಿವೃದ್ಧಿ ಪಡಿಸುವ ಯೋಜನೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ. ಆದರೆ ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಅನುದಾನ ಸಂಹಿತೆಯಡಿಯಲ್ಲಿ ರಾಜ್ಯದ ವಕ್ಫ್ ಸಂಸ್ಥೆಗಳಿಗೆ ಮಸೀದಿ, ಈದ್ಗಾ, ದರ್ಗಾ, ಖಬ್ರಸ್ತಾನ್ ಹಾಗೂ ಆಶೂರ್‌ಖಾನ್ ಮುಂತಾದವುಗಳ ಜೀರ್ಣೋದ್ಧಾರ, ದುರಸ್ಥಿ ಹಾಗೂ ನಿರ್ಮಾಣಕ್ಕಾಗಿ ಸರ್ಕಾರದಿಂದ ಅನುದಾನ ನೀಡಲಾಗುತ್ತಿದೆ.

ರಾಜ್ಯದ ಜೈನ್ ಸಮೂದಾಯ ಒಳಗೊಂಡಂತೆ ಅಲ್ಪಸಂಖ್ಯಾತರ ಸಂಸ್ಥೆಗಳಿಗೆ ಶಾದಿಮಹಲ್ ಹಾಗೂ ಸಮುದಾಯ ಭವನಗಳನ್ನು ನಿರ್ಮಾಣ ಮಾಡಲು ಅನುದಾನ ನೀಡಲಾಗುತ್ತದೆ.

ಆ) ಈ ಕಾಮಗಾರಿಗಳನ್ನು ಮಂಜೂರು ಮಾಡಲು ಇರುವ ನಿಯಾಮಾವಳಿಗಳೇನು?

1. ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಅನುದಾನ ಸಂಹಿತೆಯಡಿಯಲ್ಲಿನ ನಿಯಮಗಳಂತೆ ವಕ್ಫ್ ಸಂಸ್ಥೆಗಳಿಗೆ ಅನುದಾನ ನೀಡಲಾಗುವುದು.

2. ರಾಜ್ಯದ ಅಲ್ಪಸಂಖ್ಯಾತರ ಸಂಸ್ಥೆಗಳಿಗೆ ಸರ್ಕಾರಿ ಆದೇಶ ಸಂಖ್ಯೆ: 245 ಬಿಎಂಎಸ್ 200 ದಿನಾಂಕ: 05.10.2000ರಲ್ಲಿ ನೀಡಿರುವ ಮಾರ್ಗಸೂಚಿಯಂತೆ ಶಾದಿಮಹಲ್/ ಸಮುದಾಯ ಭವನಗಳ ನಿರ್ಮಾಣಕ್ಕಾಗಿ ಅನುದಾನ ನೀಡಲಾಗುವುದು.

ಇ) ತೇರದಾಳ ಮತಕ್ಷೇತ್ರದಲ್ಲಿ ಅಲ್ಪಸಂಖ್ಯಾತರ ಜನಸಂಖ್ಯೆ ಹೆಚ್ಚಿನ ಪ್ರಮಾಣದಲ್ಲಿದ್ದು, ಅನೇಕ ಮಸೀದಿಗಳು ಮತ್ತು ಜೈನ್ ಮಂದಿರಗಳು ಶಿಥಿಲಗೊಂಡಿದ್ದು, ಅವುಗಳ ಜೀರ್ಣೋದ್ಧಾರಕ್ಕಾಗಿ ಸರ್ಕಾರವು ಕೈಗೊಳ್ಳಲಿರುವ ಕ್ರಮವೇನು?

ಸೂಕ್ತ ಪ್ರಸ್ತಾವನೆಗಳು ಸರ್ಕಾರದಲ್ಲಿ ಸ್ವೀಕೃತವಾದಲ್ಲಿ ಪರಿಶೀಲಿಸಲಾಗುವುದು.

ಈ) ಶಾದಿಮಹಲ್‌ಗಳ ಮಂಜೂರಾತಿಯಲ್ಲಿ ತಾರತಮ್ಯವಾಗಿರುವುದು ನಿಜವೇ?

ಇಲ್ಲ.

ಉ) ಹಾಗದ್ದಲ್ಲಿ, ಅದನ್ನು ಸರಿ ಪಡಿಸಲು ಸರ್ಕಾರವು ಕೈಗೊಳ್ಳಲಿರುವ ಕ್ರಮವೇನು?

ಉದ್ಭವಿಸುವುದಿಲ್ಲ.

ಸಂಖ್ಯೆ: ಎಂಡಬ್ಲ್ಯೂಡಿ 95 ಡಬ್ಲ್ಯೂಇಎಸ್ 2009

(ಪ್ರೊ.ಡಾ: ಮುಮ್ತಾಜ್ ಅಲಿ ಖಾನ್)
ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು.

<u>ವಿಧಾನ ಸಭೆ</u>

367 ಶ್ರೀ ಸಿದ್ದು ಸವದಿ
ಸಮಾಜ ಕಲ್ಯಾಣ ಸಚಿವರು

ಅ) ರಾಜ್ಯದಲ್ಲಿರುವ ಮೊರಾರ್ಜಿ ದೇಸಾಯಿ ಶಾಲೆಗಳ ಸಂಖ್ಯೆ ಎಷ್ಟು (ಕ್ಷೇತ್ರವಾರು ಮಾಹಿತಿ ಒದಗಿಸುವುದು.);

385

ಆ ಸಂಬಂಧದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಈ ಶಾಲೆಗಳನ್ನು ಬಡವರು ಮತ್ತು ದಲಿತ ಜನಾಂಗ ಹೆಚ್ಚಿರುವ ಕ್ಷೇತ್ರಗಳಲ್ಲಿ ಪ್ರಾರಂಭಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಗ್ರಾಮೀಣ ಪ್ರದೇಶಗಳಲ್ಲಿ ಅಗತ್ಯತೆ ಆಧಾರದ ಮೇಲೆ ಅಂತಹ ಶಾಲೆಗಳನ್ನು ಪ್ರಾರಂಭಿಸಲಾಗುತ್ತಿದ್ದು ಈ ಶಾಲೆಗಳಲ್ಲಿ ಬಡವರು ಮತ್ತು ದಲಿತ ಜನಾಂಗದ ಮಕ್ಕಳೂ ಸಹ ಓದಲು ಅವಕಾಶವಿರುತ್ತದೆ.

ಇ) ಹಾಗಿದ್ದಲ್ಲಿ, ತೇರದಾಳ ಮತ ಕ್ಷೇತ್ರದ ಚಿಮ್ಮಡ ಮತ್ತು ತೇರದಾಳದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಬೇಡಿಕೆ ಬಂದಿದೆಯೇ;

ಬೇಡಿಕೆ ಬಂದಿದೆ. ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಹಾಗಿದ್ದಲ್ಲಿ, ಆ ಸ್ಥಳಗಳಲ್ಲಿ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರವು ಕೈಗೊಳ್ಳಲಿರುವ ಕ್ರಮವೇನು?

2009–10ನೇ ಸಾಲಿನ ಆಯವ್ಯಯದ ಲಭ್ಯತೆ ಮೇರೆಗೆ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಸಕಇ 31 ಮೊದೇಶಾ 2009

(ಡಿ.ಸುಧಾಕರ್)